## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 355/2024.

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು : 1. ಶ್ರೀ. ಸಂತೋಷ ತಂದೆ ಸೋಮನಿಂಗ ವಡ್ಡರ,
ವಯಸ್ಸು : 23 ವರ್ಷ, ವೃತ್ತಿ : ಗೌಂಡಿ ಕೆಲಸ,
ಸಾಃ ಸಿದ್ದರಾಮೇಶ್ವರಗಲ್ಲಿ, ಹಳಿಯಾಳ ಪಟ್ಟಣ.

2. ಶ್ರೀ ಸುರೇಶ ತಂದೆ ಯಮನೂರ ವಡ್ಡರ,
ವಯಸ್ಸು : 25 ವರ್ಷ, ವೃತ್ತಿ : ಗೌಂಡಿ ಕೆಲಸ,
ಸಾಃ ಸಿದ್ದರಾಮೇಶ್ವರಗಲ್ಲಿ, ಹಳಿಯಾಳ ಪಟ್ಟಣ.

## ದೋಷಾರೋಪಣೆ

ನಾನು ಗೀತಾ ಬಿ.ಎ. ಎಲ್.ಎಲ್.ಬಿ.(**Hons**), ಎಲ್ ಎಲ್ ಎಮ್. ಪ್ರ.ದ.ನ್ಯಾದಂ. ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೊಷಾರೋಪಣೆ ಏನೆಂದರೆ,

ದಿನಾಂಕ 07-01-2024 ರಂದು ಸಂಜೆ 06-30 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಹಳಿಯಾಳ ಶಹರದ ಫಡ್ನಿಸ್ ಸರ್ಕಲ್ ಹತ್ತಿರ ಪಿರ್ಯಾದಿಯು ಮೋಟಾರ ಸೈಕಲ್ ಮೇಲೆ ಹೋಗುತ್ತಿದ್ದಾಗ ಆರೋಪಿತರಾದ ನೀವು ಸಮಾನ ಉದ್ದೇಶಹೊಂದಿ ಮೋಟಾರ ಸೈಕಲ್ ಗೆ ಅಡ್ಡಗಟ್ಟಿ, 1 ನೇ ಆರೋಪಿಯಾದ ನೀವು ಪಿರ್ಯಾದಿಯನ್ನು ಉದ್ದೇಶಿಸಿ ಹಡಸು ಸೂಳೆ ಮಗನೆ ಇವತ್ತ ಮಾರ್ಕೇಟ್ ಗೊತ್ತಿದೆಯಲ್ಲ ನನಗೆ ಅಡ್ಡಬರುತ್ತಿ ಬದಿಗೆ ಹೋಗಲು ಆಗುವುದಿಲ್ಲ, ಬೋಸುಡಿ ಮಗನೆ ನಿನ್ನ ತಾಯಿನಹಡಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವರ ಶಾಂತಿಗೆ ಭಂಗ ಉಂಟು ಮಾಡಿ ಅವರಿಗೆ ಅವಮಾನ ಆಗುವಂತೆ ನಿಂದಿಸುವ ಮೂಲಕ ನೀವು ಭಾ.ದಂ.ಸಂ. ಕಲಂ. 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಮಾಡಿರುವುದಾಗಿ ಆಪಾದಿಸಲಾಗಿದೆ.

ಎರಡನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ 2 ನೇ ಆರೋಪಿಯಾದ ನೀವು ಪಿರ್ಯಾದಿಗೆ ಕೈಯಿಂದ ಮೈ ಕೆ ಮೇಲೆ ಹೊಡೆದು ಸಾದಾ ಸ್ವರೂಪದ ಗಾಯಗಳನ್ನು ಉಂಟುಮಾಡುವ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಮೂರನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ 2 ನೇ ಆರೋಪಿಯಾದ ನೀವು ಬೆಳ್ಳಿ ನಮೂನೆಯ ಬ್ರಾಸ್ ಲೈಟ್‌ನಿಂದ ಪಿರ್ಯಾದಿಯ ತಲೆಯ ಹಿಂಬದಿಗೆ ಹಣೆಯ ಮೇಲೆ ಮತ್ತು ಭುಜಕ್ಕೆ ಹೊಡೆದು ಸಾದಾ ಸ್ವರೂಪದ ಗಾಯಗಳನ್ನು ಉಂಟುಮಾಡುವ ಮೂಲಕ ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ನಾಲ್ಕನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಪಿರ್ಯಾದಿಯ ಮೋಟಾರ ಸೈಕಲ್ ಗೆ ಅಡ್ಡಗಟ್ಟಿ ತಡೆದು ಅವರು ಹಕ್ಕುಳ್ಳ ದಿಕ್ಕಿನ ಕಡೆಗೆ ಸಾಗಲು ಅವಕಾಶ ಮಾಡಿಕೊಡದೇ ಕಾನೂನು ಬಾಹಿರವಾಗಿ ನಿಗ್ರಹಿಸುವ ಮೂಲಕ ನೀವು ಭಾ.ದಂ.ಸಂ ಕಲಂ 341 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಕೊನೆಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಪಿರ್ಯಾದಿಯನ್ನು ಉದ್ದೇಶಿಸಿ "ಈ ದಿವಸ ಉಳಿದುಕೊಂಡಿದ್ದಿ ಇನ್ನೊಂದು ಬಾರಿ ಸಿಕ್ಕರೆ ನಿನಗೆ ಜೀವ ಸಹಿತ ಬಿಡುವುದಿಲ್ಲ" ಎಂದು ಜೀವ ಬೆದರಿಕೆ ಹಾಕುವ ಮೂಲಕ ನೀವು ಭಾ.ದಂ.ಸಂ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಆರೋಪಿ ಕ್ರ.1**

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರ : ವಿಚಾರಣೆಯಾಗಬೇಕು.

**ಆರೋಪಿಯ ಸಹಿಃ**

**ಆರೋಪಿ ಕ್ರ.2**

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರ : ವಿಚಾರಣೆಯಾಗಬೇಕು.

**ಆರೋಪಿಯ ಸಹಿಃ**

ಆರೋಪಿತರಿಗೆ ದೋಷರೋಪಣೆಯ ಸಾರಾಂಶವನ್ನು ಅವರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು.

ಸ್ಥಳ : ಹಳಿಯಾಳ.

ದಿನಾಂಕ : 28-04-2026. ಪ್ರ.ದ.ನ್ಯಾದಂ., ಹಳಿಯಾಳ.